## ಕೂಟಗಲ್ ನಾಡ ಕಛೇರಿ ಅಧಿಕಾರಿಗಳಿಂದ ರೈತರಿಗೆ ಕಿರುಕುಳ

೪೨೨. ಶ್ರೀ ಎಂ. ನಾರಾಯಣಸ್ವಾಮಿ, (ಬೇತಮಂಗಲ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿಯಲ್ಲಿ ನಾಡ ಕಚೇರಿ ಇದೆಯೇ ?

ಆ) ನಾಡಕಚೇರಿ ಇದ್ದಲ್ಲಿ, ಆ ಕಚೇರಿಯ ಸೆಕ್ರೆಟರಿ ಉಪ ತಹಶೀಲ್ದಾರ್ ಇವರುಗಳು ರೈತರಿಗೆ ಹಾಗೂ ಜಮೀನುದಾರರಿಗೆ ಬಾತೆ ಮಾಡುವಲ್ಲಿ ಹಾಗೂ ಪಹಣಿ ಬರೆಯುವ ಬಗ್ಗೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಬಗ್ಗೆ ಸರ್ಕಾರವು ಸಂಬಂಧಪಟ್ಟ ನೌಕರರ ಮೇಲೆ ವಿಚಾರಣೆ ನಡೆಸಿ ಸೂಕ್ತಕ್ರಮ ತೆಗೆದುಕೊಂಡಿರುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಈ ನಾಡ ಕಚೇರಿಯು ಸಿಬ್ಬಂದಿಯ ಬಗ್ಗೆ ಈ ತರಹದ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಪೆಚ್. ಕೌಜಲಗಿ (ಮಾನ್ಯ ಎಂ. ನಾರಾಯಣಸ್ವಾಮಿ. (ಬೇತಮಂಗಲ) ಇವರ ಪರವಾಗಿ).— ಮಾನ್ಯ ಅಧ್ಯಕ್ಷರೇ, ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿಯ ನಾಡ ಕಚೇರಿ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅಲ್ಲಿ ಇರತಕ್ಕಂಥ ಗ್ರಾಮ ಲೆಕ್ಕಿಗರು ಹಾಗೂ ಅಲ್ಲಿನ ಉಪ ತಹಶೀಲ್ದಾರ್ ಕಚೇರಿಯಲ್ಲಿ ಅನ್ಯಾಯವಾಗುತ್ತಿದೆ ಎಂದು ಕೇಳಿದ್ದೀವೆ. ಮೊದಲನೆಯಂದಾಗಿ, ಇವರಂ ಕೆಲವು ಜಮೀನುಗಳನ್ನು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಸರ್ಕಾರದ ಜಮೀನನ್ನು ೧೯೪೪ನೇ ಇಸವಿಯಿಂದ ಮೊದಲು ಯಾರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ, ಇದು ಅವರ ಹೆಸರಿಗೆ ಹೋಗ ಬೇಕು ಎಂದು ಹೇಳಿ ನಾಡಕಚೇರಿಯ ಸೆಕ್ರೆಟರಿ ಮತ್ತು ಉಪತಹಶೀಲ್ದಾರ್–ಇವರುಗಳು ಸರ್ಕಾರದ ಜಮೀನನ್ನು ಹೊಡೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆ ಸರ್ವೆ ನಂಬರು ಈ ರೀತಿ ಯಾಗಿವೆ. ೨೧೫(೧), ೨೧೭(೨), ೨೧೮.೨೧೯. ಈ ಸರ್ವೆ ನಂಬರಿನಲ್ಲಿ ಬೇರೆ ಬೇರೆ ಹೆಸರಿನಲ್ಲಿ ಹಿಂದಿನ ತಾರೀಖಿನ್ನು ಹಾಕಿ ಎಂಟ್ರಿ ಮಾಡುವುದಕ್ಕೆ, ತಿದ್ದುವುದಕ್ಕೆ ಈ ಮೇಲಿನ ಅಧಿಕಾರಿಗಳು ಹೊರಟಿದ್ದಾರೆ. ಇದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ನಿಯಮ ೪೩ಗಿ ರಲ್ಲಿ ಮಾಗಡಿಯ ಶಾಸಕರಾದ ಮಾನ್ಯ ರೇವಣ್ಣನವರು ಇದರ ಬಗ್ಗೆ ಕೇಳಿದ್ದರು. ಇದಕ್ಕೆ ಮೊದಲು ನಮಗೆ ಯಾರ ವಿರುದ್ಧ ಕಂಪ್ಲೆಂಟ್ಸ್ ಬಂದಿತ್ತು, ಅವರುಗಳನ್ನು ಈಗಾಗಲೇ ವರ್ಗಾವಣೆ ಮಾಡಲಾಗಿದೆ. ಮತ್ತು ಸಸ್ಪೆನ್‌ಷನ್‌ನಲ್ಲಿ ಕೂಡಾ ಇಡಲಾಗಿದೆ. ಈ ವಿಷಯ ಈಗಾಗಲೇ ಮುಕ್ತಾಯವಾಗಿದೆ.

ಶ್ರೀ ಶಿವಾನಂದ ಪೆಚ್. ಕೌಜಲಗಿ. — ಇವರುಗಳು ಜಮೀನುಗಳನ್ನು ಬೇರೆಯವರ ಹೆಸರಿಗೆ ಮಾಡಿಕೊಡುವುದಕ್ಕೆ ೧೯೪೪ನೇ ಇಸವಿಯ ಎಂಟ್ರೀಸ್‌ನ್ನು ಬದಲು ಮಾಡಿದ್ದಾರೆ. ರೆಕಾರ್ಡ್‌ನಲ್ಲಿ ನೋಡಿದಾಗ ನಿಜವಾಗಿ ಸಿಕ್ಕ ತಕ್ಕಂಥ ಜನರಿಗೆ ಸಿಗುವುದಿಲ್ಲ. ಇದರಿಂದ ಬಹಳ ಜನರಿಗೆ ಅನ್ಯಾಯ ವಾಗುತ್ತದೆ. ಅದಕಾರಣ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲಿ ಅವರುಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ ? ತಪ್ಪು ಮಾಡದಿದ್ದರೆ ಕ್ರಮ ತೆಗೆದುಕೊಳ್ಳುವುದು ಬೇಡ. ಇಲ್ಲಿ ತಪ್ಪು ಮಾಡಿರುವುದರಿಂದ ಅವರುಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅವರುಗಳ ಮೇಲೆ ಎನ್‌ಕ್ವೈರಿ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅವರಲ್ಲಿರತಕ್ಕಂಥ ಕಾಗದ ಪತ್ರಗಳನ್ನು ಮತ್ತು ಸರ್ವೆ ನಂಬರುಗಳನ್ನು ಕಳುಹಿಸಿಕೊಡಲಿ, ನಾನು ತಕ್ಷಣವೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.